ಆದರೆ, ಆ ಇನ್ನೊಂದು ಜೊತೆ ಪಾದಗಳು? ಅವುಗಳಿಗೆ ಈ ಮನೆಯ ಓರೆ ಕೋರೆಗಳ ಪರಿಚಯವಿಲ್ಲ. ಅತಿ ಜಾಗ್ರತೆಯಿಂದ ಊರಿದ ಮುದ್ರೆಗಳಿಗೆ ಒಂದು ಬಗೆಯ ನಯವಿರುತ್ತದೆ. ತಮ್ಮ ನಿಶಾನೆಗಳನ್ನು ಇಲ್ಲೆಲ್ಲೂ ಬಿಟ್ಟು ಹೋಗಬಾರದು ಎಂಬ ಕಾಳಜಿಯಿರುತ್ತದೆ.

ನಮ್ಮ ಶೂ ರ್‍ಯಾಕಿನ ಎಡ ಮೂಲೆಯಲ್ಲಿ ಕಾಲೂರಿದರೆ ಕ್ರ್... ಎಂಬ ಕರ್ಕಶ ಹೊರಡುತ್ತದೆ. ಇಡೀ ಮನೆ ಕಟ್ಟಿಗೆಯ ಹಲಗೆಗಳಿಂದಲೇ ಕಟ್ಟಿದ್ದುದರಿಂದ ಇಂಥ ಐದಾರು ಸ್ಥಳಗಳು ನಮ್ಮ ಮನೆಯೊಳಗೆ ಇವೆ. ರಾತ್ರಿ ಬಂದಾಗ ಮಾರ್ಕೋ ಎಂದಿಗೂ ತಪ್ಪಿಯೂ ಈ ಜಾಗಗಳಲ್ಲಿ ಕಾಲಿಟ್ಟಿಲ್ಲ. ಆದರೆ, ಆ ಅವಳು ಮೊದಲನೆಯ ದಿನವೇ ಅಂಥ ಎರಡು ಮೂರು ಕಡೆಗಳಲ್ಲಿ ನಡೆದಾಡುವುದೂ, ಮಾರ್ಕೋ ಓಡಿ ಬಂದು ಅವಳನ್ನು ತಡೆಯುವುದು ನಡೆಯುತ್ತಲೇ ಇತ್ತು.

ಅವಳು ಹುಡುಗಿಯೇ ಎಂಬ ಬಗ್ಗೆಯೂ ನನಗೊಂದು ಅಂದಾಜಿದೆ. ತನ್ನ ಕ್ಷೇತ್ರದಲ್ಲಿ ತಪ್ಪಿ ಕಾಲಿಟ್ಟವರನ್ನು ಹೆಬ್ಬಾವು ತಕ್ಷಣ ಗುರುತಿಸುವಂತೆ ಈ ಮನೆಯಲ್ಲಿ ಇನ್ನೊಬ್ಬಳು ಹೆಣ್ಣು ಓಡಾಡಿದರೆ ಅದು ಹೇಗೋ ನನ್ನ ಒಳಜೀವಕ್ಕೆ ತಿಳಿದುಬಿಡುತ್ತದೆ. ಹಾಗೆ ನಡೆಯುವುದು ಅಷ್ಟೊಂದು ಅಪರೂಪವಾಗಿರುವುದರಿಂದಲೂ ಇದು ಸಾಧ್ಯವಾಗಿರಬಹುದು.

"ಮಾರ್ಕೋ, ನಿನ್ನೆ ರಾತ್ರಿ ಮನೆಗೆ ಯಾರಾದರೂ ಬಂದಿದ್ದರೇನು?"

ಅವನು ಗಾಬರಿಗೆ ಬಿದ್ದಿದ್ದು ಸ್ಪಷ್ಟವಿತ್ತು.

"ಅವನೇ ನನ್ನ ದೋಸ್ತ ಆಂಡ್ರೂ. ಇವತ್ತು ಬೆಳಗ್ಗೆ ಎಂಟು ಗಂಟೆಗೆ ಒಂದು ಅಸೈನ್‌ಮೆಂಟ್ ಡೆಡ್‌ಲೈನ್ ಇತ್ತು. ಅದಕ್ಕಾಗಿ ಡಿಸ್ಕಸ್ ಮಾಡಲು ಬಂದಿದ್ದ."

"ನಿನ್ನ ದೋಸ್ತ ಆಂಡ್ರೂ ಈ ಕ್ಲಿಪ್ಪು ಹಾಕಿಕೊಳ್ಳುತ್ತಾನೇನು? ಬೆಳಗ್ಗೆ ಬಾತ್‌ರೂಮಿನಲ್ಲಿ ಸಿಕ್ಕಿತು."

ಅದು ನನ್ನದೇ ಹಳೆಯ ಕ್ಲಿಪ್ಪಾಗಿತ್ತು. ಮಾರ್ಕೋನಿಂದ ಸತ್ಯ ಹೊರಗೆಡವಲು ಅದನ್ನು ಬೀರುವಿನಿಂದ ತೆಗೆದುಕೊಂಡು ಬಂದಿದ್ದೆ.

"ಅವನೊಂದಿಗೆ ಅವನ ತಂಗಿ ಬಂದಿದ್ದಳು. ಅವಳದಿರಬಹುದು."

"ಆಂಡ್ರೂ ಮಧ್ಯರಾತ್ರಿ ಅವನ ತಂಗಿಯ ಜೊತೆಗೆ ಓಡಾಡುತ್ತಾನೇನು?"

ಮಾರ್ಕೋನ ಮುಖದಲ್ಲಿ ಅಸಹನೆ ಅಚ್ಚೊತ್ತತೊಡಗಿತ್ತು.

"ವಾಟ್ ಡು ಯೂ ವಾಂಟ್ ಟು ನೋ ಮಾಮ್?"

ಸಮಾಧಾನ ಹೊತ್ತ ನನ್ನ ಮುಖವಾಡ ಕಳಚಿ ಬಿತ್ತು. ನನ್ನದಲ್ಲದ ಸ್ವರದಲ್ಲಿ ಒದರತೊಡಗಿದೆ.

"ನೀನು ಹೀಗೆ ಮಾಡಬಾರದು ಮಾರ್ಕೋ. ಹುಡುಗಿಯರನ್ನೆಲ್ಲ ಮನೆಗೆ ಕರೆದುಕೊಂಡು ಬರಬಾರದು. ನಾಳೆ ಒಂದು ಹೋಗಿ ಇನ್ನೊಂದಾದರೆ ನೇರವಾಗಿ ಜೈಲಿಗೆ ಹೋಗಬೇಕಾಗುತ್ತದೆ. ನೀನಷ್ಟೇ ಅಲ್ಲ, ನಾನು ಮತ್ತು ಡ್ಯಾಡಿ ಕೂಡ. ಮುಂದಿನ ವರ್ಷ ನೀನು ಕಾಲೇಜಿಗೆ ಹೋದ ಮೇಲೆ ಏನು ಬೇಕಾದರೂ ಮಾಡಿಕೋ. ಆದರೆ ಇಲ್ಲಿ, ನನ್ನ ಮನೆಯಲ್ಲಿರುವ ತನಕ ನೀನು ಈ ಮನೆಯ ನಿಯಮಗಳನ್ನು ಫಾಲೋ ಮಾಡಲೇ ಬೇಕು. ತಿಳಿಯಿತೇನು?"

ಮಾರ್ಕೋ ಕೂಡ ವಾದಕ್ಕೆ ಸಿದ್ಧವಾಗಿಯೇ ಕುಳಿತಿದ್ದ.

"ನೀನು ಓವರ್ ರಿಯಾಕ್ಟ್ ಮಾಡುತ್ತಿದ್ದೀ ಮಾಮ್. ಪೆಮಾ ಎನ್ನುವ ಹುಡುಗಿ ನಿನ್ನೆ ರಾತ್ರಿ ಬಂದಿದ್ದು ನಿಜ. ಆದರೆ, ನಾವು ಹೋಮ್‌ವರ್ಕ್ ಮಾಡುತ್ತಿದ್ದೆವು ಅಷ್ಟೇ."

ನನಗೆ ಮಾತನ್ನು ಮುಂದುವರೆಸುವ ಇಚ್ಛೆಯಿರಲಿಲ್ಲ.

"ಸರಿ. ಹೋಮ್‌ವರ್ಕ್ ಮಾಡಲು ಸಂಜೆ ನಾನಿರುವಾಗಲೇ ಬರಲಿ ಅವಳು. ಮಧ್ಯರಾತ್ರಿ ಬರೋದು ಬೇಡ."

ಜೈಲು, ಏನು ಬೇಕಾದರೂ ಮಾಡಿಕೋ, ನನ್ನ ಮನೆ, ನಿಯಮಗಳು ಮುಂತಾದ ಶಬ್ದಗಳನ್ನು